ಜೆಎಸ್ಎಸ್ ಮಹಾವಿದ್ಯಾಪೀಠ

# ಜೆಎಸ್ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

**ಪ್ರಕಟಣೆಯ ಕೃಪೆಗಾಗಿ**

## ಮಹಿಳಾ ಶಿಕ್ಷಣವಿಲ್ಲದೆ ಆರೋಗ್ಯಕರ ಸಮಾಜ ನಿರ್ಮಾಣ ಅಸಾಧ್ಯ- ಪ್ರೊ.ಮಹದೇವಪ್ರಸಾದ್

### ಜೆಎಸ್ಎಸ್‌ನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಕೊಳ್ಳೇಗಾಲ: 8.3.2019 ಮಹಿಳೆಯರ ಶಿಕ್ಷಣ, ಸಾಮರ್ಥ್ಯ, ಒಳನೋಟಗಳನ್ನು ಉಪಯೋಗಿಸಿಕೊಳ್ಳದೆ ಆರೋಗ್ಯಕರ ಸಮಾಜ ನಿರ್ಮಿಸುವುದು ಅಸಾಧ್ಯ ಎಂದು ಕಬ್ಬಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ.ಮಹದೇವಪ್ರಸಾದ್ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿನಿಯರ ವೇದಿಕೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ **"ಹಿರಿಯ ವಿದ್ಯಾರ್ಥಿನಿಯರಿಗೆ ಸನ್ಮಾನ"** ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಎಲ್ಲ ಕ್ಷೇತ್ರಗಳಲ್ಲಿ ತನ್ನದೇ ಛಾಪು ಮೂಡಿಸಿರುವ ಮಹಿಳೆಗೆ ತನ್ನದೇ ಒಂದು ವ್ಯಕ್ತಿತ್ವ ಇದೆ. ಕಲಿತ, ಉನ್ನತ ಶಿಕ್ಷಣ ಪಡೆದ ಮಹಿಳೆಯರು ತಮ್ಮ ವ್ಯಕ್ತಿತ್ವನ್ನು ಮರೆತು ಮನೆಯೊಳಗಿನ ಸದಸ್ಯರಾಗಿ ಉಳಿಯದೆ ತಮ್ಮ ಶಿಕ್ಷಣ, ಸಾಮರ್ಥ್ಯ, ಕೌಶಲ, ಸಹನೆ, ದೂರದೃಷ್ಟಿ, ಎಲ್ಲವೂ ಸಮಾಜಕ್ಕೆ ಸದ್ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಮಹಿಳೆ ಶಿಕ್ಷಿತಳಾದರೆ ಇಡೀ ಸಂಸಾರ ಹಾಗೂ ಸಮಾಜವೇ ಶಿಕ್ಷಿತವಾದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಸಾಮರ್ಥ್ಯ ಆಕೆಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ.ಉಮೇಶ ಮಹಿಳೆಯರು ಆತ್ಮಸ್ಥೈರ್ಯದ ಕೊರತೆಯಿಂದ ಹೊರಬರಬೇಕು. ಪುರುಷರಿಗಿಂತ ಮಹಿಳೆಯರೇ ಬಲಾಢ್ಯರು ಹಾಗೂ ಬುದ್ಧಿವಂತರು ಎಂಬುದನ್ನು ಅನೇಕ ಬಾರಿ ಅವರಿಂದಲೇ ನಿರೂಪಿಸಲ್ಪಟ್ಟಿದೆ. ನಿಸರ್ಗದಿಂದಲೇ ಆ ಶಕ್ತಿ ಅವರಿಗೆ ವರವಾಗಿ ಬಂದಿದೆ. ಆದರೆ ಪುರುಷ ಪ್ರಧಾನ ಸಮಾಜ ಎನಿಸಿಕೊಳ್ಳುವ ನಮ್ಮ ಸಮಾಜದಲ್ಲಿ ಆಕೆಗೆ ನೀಡುತ್ತಿರುವ ಗೌರವದ ಜೊತೆಗೆ ಸಮಾನ ಅವಕಾಶಗಳನ್ನು ನೀಡುವ ಅವಶ್ಯಕತೆಯಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜಿನಲ್ಲಿ ಪದವಿ ಪಡೆದು ತಲಕಾಡಿನಲ್ಲಿ ಎಂ.ಸಿ.ಡಿ.ಸಿ.ಸಿ ಬ್ಯಾಂಕಿನ ಮಾನೇಜರ್ ಹುದ್ದೆ ಹಾಗೂ ಹನೂರಿನ ಸರ್ಕಾರಿ ಪ್ರಥಮ ಕಾಲೇಜಿನಲ್ಲಿ ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ಹುದ್ದೆಯನ್ನು ಅಲಂಕರಿಸಿರುವ ಹಿರಿಯ ವಿದ್ಯಾರ್ಥಿನಿಯರಾದ ಕು.ಪವಿತ್ರ ಹಾಗೂ ಶ್ರೀಮತಿ ವಾಣಿರವರನ್ನು ಸನ್ಮಾನಿಸಲಾಯಿತು. ನಂತರ ಮಾತನಾಡಿದ ಅವರು ವಿದ್ಯೆ ಅಲಂಕಾರ, ಅಧಿಕಾರ, ಅಂತಸ್ತಿಗಿಂತ ಹೆಣ್ಣಿಗೆ ಬೇಕಿರುವುದು ವ್ಯಕ್ತಿತ್ವದ ಗಟ್ಟಿತನ, ಇಂದು ಮಹಿಳೆಗೆ ಕಾನೂನಿನ ಬೆಂಬಲಗಳಿವೆ. ಅದಕ್ಕಿಂತಲೂ ಮುಖ್ಯವಾಗಿ ಹೆಣ್ಣನ್ನು ಗೌರವಿಸುವ ಆಕೆಯ ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವ ಪುರುಷರ ಬಗ್ಗೆ ಹೆಮ್ಮೆ ಎನಿಸುತ್ತದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುನ್ನತ ಸಾಧನೆಗೈದ 50 ಮಹಿಳೆಯರನ್ನು ಕುರಿತು ಪಿ.ಪಿ.ಟಿ ಹಾಗೂ ವೀಡಿಯೋ ಮೂಲಕ ವಿದ್ಯಾರ್ಥಿನಿಯರಿಗೆ ಪರಿಚಯ ಮಾಡಿಕೊಡಲಾಯಿತು. ನಂತರ ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು.

ಹಿರಿಯ ವಿದ್ಯಾರ್ಥೀನಿಯರ ವೇದಿಕೆ ಸಂಚಾಲಕಿ ಶ್ರೀಮತಿ ವಾಣಿ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ.ಎಂ.ಪ್ರಭು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಿರಿಯ ವಿದ್ಯಾರ್ಥಿನಿಯರ ವೇದಿಕೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ **"ಹಿರಿಯ ವಿದ್ಯಾರ್ಥಿನಿಯರಿಗೆ ಸನ್ಮಾನ"** ಸಮಾರಂಭವನ್ನು ಡಾ.ಮಹದೇವಪ್ರಸಾದ್‌ರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಡಾ.ಪ್ರಭು, ಕು.ಪವಿತ್ರ, ಪ್ರಾಚಾರ್ಯ ಪ್ರೊ.ಉಮೇಶ, ಶ್ರೀಮತಿ ವಾಣಿ ಮತ್ತು ಶ್ರೀಮತಿ ವಾಣಿರವರನ್ನು ಕಾಣಬಹುದು.



ಹಿರಿಯ ವಿದ್ಯಾರ್ಥಿನಿಯರ ವೇದಿಕೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ **"ಹಿರಿಯ ವಿದ್ಯಾರ್ಥಿನಿಯರಿಗೆ ಸನ್ಮಾನ"** ಸಮಾರಂಭವನ್ನು ಡಾ.ಮಹದೇವಪ್ರಸಾದ್‌ರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಡಾ.ಪ್ರಭು, ಕು.ಪವಿತ್ರ, ಪ್ರಾಚಾರ್ಯ ಪ್ರೊ.ಉಮೇಶ, ಶ್ರೀಮತಿ ವಾಣಿ ಮತ್ತು ಶ್ರೀಮತಿ ವಾಣಿರವರನ್ನು ಕಾಣಬಹುದು



ಹಿರಿಯ ವಿದ್ಯಾರ್ಥಿನಿಯರಾದ ಶ್ರೀಮತಿ ವಾಣಿ ಹಾಗೂ ಕು.ಪವಿತ್ರರವರನ್ನು ಸನ್ಮಾನಿಸುತ್ತಿರುವುದು. ಚಿತ್ರದಲ್ಲಿ ಡಾ.ಪ್ರಭು, ಡಾ.ಮಹದೇವಪ್ರಸಾದ್ , ಪ್ರಾಚಾರ್ಯ ಪ್ರೊ.ಉಮೇಶ ಮತ್ತು ಶ್ರೀಮತಿ ವಾಣಿರವರನ್ನು ಕಾಣಬಹುದು




ಸಮಾರಂಭದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು.

